ಇಂಥವರು ಸಾರ್ವಜನಿಕವಾಗಿ ಮಹಿಳಾ ಹಕ್ಕಿಗಾಗಿ ಹೋರಾಟ ನಡೆಸಿ ಶಹಬ್ಬಾಸ್ ಅನ್ನಿಸಿಕೊಂಡವರೂ ಆಗಿರುತ್ತಾರೆ. ಈ ರೀತಿಯ ಚಿಂತನೆ ಇನ್ನೂ ಭದ್ರವಾಗಿ ಪುರುಷ ಮನಸ್ಸುಗಳಲ್ಲಿ ಬೇರೂರಿದೆ. ಇದು ಅವಿದ್ಯಾವಂತ ಸಮಾಜದಲ್ಲಿ ಮಾತ್ರವಲ್ಲ ವಿದ್ಯಾವಂತ ಸಮಾಜದಲ್ಲೂ ಸಹಜವೆನ್ನಿಸುವಷ್ಟು ನಡೆಯುತ್ತಿದೆ. ಸಭ್ಯ ಮುಖವಾಡದ ಹಿಂದಿನ ಕೊಳಕು ಮನಸ್ಸುಗಳು. ನಮ್ಮ ನಮ್ಮೊಳಗಿನ ತಣ್ಣಗಿನ ಕ್ರೌರ್ಯವೆಂದರೂ ತಪ್ಪಲ್ಲ.

## ಸಂಭ್ರಮಿಸೋಣ ಬನ್ನಿ...

ಇಂದು ಮಹಿಳೆ ಹೆಚ್ಚು ಹೆಚ್ಚು ಹೊರಬರುತ್ತಿದ್ದಾಳೆ. ಸಮಾಜದಲ್ಲಿ ಸಮಾನವಾಗಿ ತೊಡಗಿಕೊಳ್ಳುತ್ತಿದ್ದಾಳೆ, ಗಂಭೀರ ಚಿಂತನೆಯಲ್ಲಿ ತೊಡಗಿಕೊಳ್ಳುತ್ತಿದ್ದಾಳೆ ಎಂದರೆ ಅದರ ಹಿಂದೆ ದೊಡ್ಡ ಹೋರಾಟದ ಹಿನ್ನೆಲೆ ಇದ್ದೇ ಇದೆ. ಅಣ್ಣ ತಮ್ಮಂದಿರಿಗೆ ಸಹಜವಾಗಿ ದೊರೆಯುವ ಸವಲತ್ತು, ಅವಕಾಶ, ಸ್ವಾತಂತ್ರ್ಯವನ್ನು ತಾನೂ ಪಡೆಯಬೇಕಿದ್ದರೆ ಅಕ್ಕನಿಗೋ ತಂಗಿಗೋ ಹೋರಾಟ ಅವಶ್ಯಕವೇ ಆಗಿರುತ್ತದೆ. ಆಕೆ ಮಾಡದೇ ಹೋದರೂ ಅಮ್ಮನಾದರೂ ಹೋರಾಡಿರುತ್ತಾಳೆ. ಹೋರಾಟದ ಪ್ರತಿಫಲವಾಗಿ ಇಂದು ಉನ್ನತ ಸ್ಥಾನಗಳಲ್ಲಿ ಮಹಿಳೆ ಕೂತಿದ್ದಾಳೆ. ಆ ಹೋರಾಟವನ್ನು ಗುರುತಿಸುವ ಉದ್ದೇಶದಿಂದಲಾದರೂ ಈ ದಿನವನ್ನು ಸಂಭ್ರಮಿಸೋಣ.

ಪುರುಷನ ಸಾಧನೆಯೆಂದರೆ ಅವನದು ಅದಕ್ಕಾಗಿಯೇ ಮೀಸಲಿಟ್ಟ ಬದುಕಾಗಿರುತ್ತದೆ. ಆತ ಸಾಧನೆಯ ಪಥದಲ್ಲಿ ಸಾಗಿದಾಗ ಹಿಂದೆ ಆತನ ಅಮ್ಮನೋ, ಪತ್ನಿಯೋ, ಅಕ್ಕನೋ ತಂಗಿಯೋ ಜೊತೆಗಿರುತ್ತಾರೆ. ಆತನ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುತ್ತಿರುತ್ತಾಳೆ. ಆದರೆ ಒಬ್ಬಾಕೆ ಇಂದು ಸಾಧಿಸಿದಳೆಂದರೆ ಹೆಚ್ಚಾಗಿ ಆ ಸಾಧನೆ ಆಕೆ ತನ್ನೆಲ್ಲಾ ಜವಾಬ್ದಾರಿಗಳನ್ನು ನಿಭಾಯಿಸಿಕೊಂಡು ಮಾಡಿದುದಾಗಿರುತ್ತದೆ. ಅದು ಯಾವುದೇ ಕ್ಷೇತ್ರವಿರಬಹುದು ಅಲ್ಲಿ ತನ್ನ ಸಾಧನೆಯ ಛಾಪನ್ನೊತ್ತಿದ್ದಾಳೆಂದರೆ ತನ್ನ ಇತರ ಜವಾಬ್ದಾರಿಗಳಿಗೂ ಅಷ್ಟೇ ಪ್ರಾಮುಖ್ಯತೆ ಕೊಟ್ಟಿರುತ್ತಾಳೆ. ಎಷ್ಟೋ ಮಹಿಳೆಯರು ಇಂದು ಸಾಧನೆ ಮಾಡಿರೂ ಅದರೊಂದಿಗೆ ತಮ್ಮ ಕೌಟುಂಬಿಕ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿರುವುದು ಅಷ್ಟೇ ಸತ್ಯ. ಆಕೆಯ ಕರ್ತೃತ್ವ ಶಕ್ತಿ ಮತ್ತು ಛಲ ಇಲ್ಲದೇ ಹೋದರೆ ಈ ಸಾಧನೆ ಸಾಧ್ಯವಾಗುವುದೇ ಇಲ್ಲ. ಈ ಸಾಧನೆಯ ಹಿಂದಿನ ಶ್ರಮವನ್ನು ಗುರುತಿಸುವುದಕ್ಕಾಗಿ ಈ ದಿನವನ್ನು ಸಂಭ್ರಮಿಸೋಣ.

ಹೆಣ್ಣು ಸಹಜವಾಗಿ ಎಲ್ಲಾ ಸಂದರ್ಭಗಳಲ್ಲೂ ಅಚ್ಚುಕಟ್ಟು. ಇದಕ್ಕೆ ಆಕ್ಷೇಪಗಳಿರಬಹುದು. ಇರಲಿ. ಆದರೆ ಆಕೆ ಒಂದು ಕೆಲಸವನ್ನು ಆರಂಭಿಸಿದರೆ ಅದನ್ನು ಪೂರ್ಣಗೊಳಿಸಿಯೇ ಸಿದ್ಧ ಆಕೆ. ಇದು ಆಕೆಯ ಸಹಜಗುಣ. ಅಡುಗೆ ಮಾಡಲಿ, ಮನೆ ಸ್ವಚ್ಛಗೊಳಿಸಲು, ಅತಿಥಿ ಸತ್ಕಾರವಿರಲಿ ಎಲ್ಲದರಲ್ಲೂ ಆಕೆ ಅಚ್ಚುಕಟ್ಟು ಮತ್ತು ನಿಷ್ಠೆ. ಇದೇ ಗುಣ ಆಕೆಯ ಕಾರ್ಯಕ್ಷೇತ್ರದಲ್ಲಿಯೂ ಆಕೆಯನ್ನು ಕಾಪಾಡುವುದು. ಹಾಗಾಗಿ ಇಂದು ಪರೀಕ್ಷಾ ಫಲಿತಾಂಶದಿಂದ ಹಿಡಿದು ಕೆಲಸ ಗಿಟ್ಟಿಸಿಕೊಳ್ಳುವುದರಲ್ಲಿಯೂ ಮಹಿಳೆಯರದೇ ಮೇಲುಗೈ. ಇದು ಸತತ ಪರಿಶ್ರಮದಿಂದ ಮಾತ್ರ ಸಾಧ್ಯ. ಇಷ್ಟೆಲ್ಲಾ ಒತ್ತಡಗಳಿದ್ದರೂ ಹಠದಿಂದ ಸಾಧಿಸಬೇಕಿದ್ದರೆ ಆಕೆಯ ಧಾರಣಾಶಕ್ತಿಯೇ ಮುಖ್ಯ ಕಾರಣ. ಅದಕ್ಕೆ ನಮೋ ಎನ್ನಬೇಕಲ್ಲವೇ. ಅಲ್ಲಲ್ಲಿ ಓದಿದಂತೆ ಎಷ್ಟೋ ದೊಡ್ಡ ದೊಡ್ಡ ಮಹಿಳಾ ಸಾಹಿತಿಗಳು ಮನೆಯಲ್ಲಿ ದೌರ್ಜನ್ಯ ಅನುಭವಿಸಿದವರೇ, ಅನುಭವಿಸುತ್ತಿರುವವರೇ. ಎಷ್ಟೋ ಸಲ ಬರೆವಣಿಗೆಯ ಖಾರ ಅವರ ಸ್ವಂತ ಅನುಭವವೇ. ಹೊರಗೆ ಕಾಣುತ್ತಿರುವಷ್ಟೇ ಬೆಳ್ಳಗೆ ನಿಜವಾಗಿಯೂ ಇರುವುದಿಲ್ಲ. ತಣ್ಣಗಿನ ಬೆಂಕಿ ತಣ್ಣಗಿನ ಕ್ರೌರ್ಯ ಒಂದು ಹೆಣ್ಣಿನ ಸರ್ವಾಂಗೀಣ ಬೆಳವಣಿಗೆಯನ್ನು ಹತ್ತಿಕ್ಕುತ್ತದೆ. ಆದರೂ ಇದೆಲ್ಲವನ್ನು ಮೆಟ್ಟಿನಿಂತು ಮಹಾಲೇಖಕಿಯರಾಗಿದ್ದಾರೆ. ಪುರುಷರಿಗೆ ಸರಿಸಮನಾಗಿ ಬದುಕುತ್ತಿದ್ದಾರೆ. ಈ ಸಂಭ್ರಮವನ್ನು ನಾವು ಸಂಭ್ರಮಿಸದಿದ್ದರೆ ಎಂತು?

ಒಂದು ಕಾಲದಲ್ಲಿ ಸೈಕಲ್ ಬಿಡಲು ಹಿಂದೆ ಮುಂದೆ ನೋಡುತ್ತಿದ್ದ ಹೆಣ್ಣು ಇಂದು ಬುಲೆಟ್ ಬೈಕ್ ಓಡಿಸುತ್ತಿದ್ದಾಳೆ, ಯುದ್ಧ ವಿಮಾನಗಳನ್ನು ಹಾರಿಸುತ್ತಿದ್ದಾಳೆ. ದೈಹಿಕವಾಗಿ ಅಬಲೆಯೆನಿಸಿದ್ದರೂ ಕೇವಲ ತನ್ನ ಆತ್ಮಸ್ಥೈರ್ಯದಿಂದ ಈ ಸಾಧನೆ ಮಾಡುತ್ತಿದ್ದಾಳೆ. ತನ್ನ ಕೌಟುಂಬಿಕ ಜವಾಬ್ದಾರಿಗಳನ್ನು ನಿಭಾಯಿಸುತ್ತಾ ಎಲ್ಲರನ್ನೂ ಸರಿದೂಗಿಸಿಕೊಂಡು ಮುಂದೆ ಸಾಗುತ್ತಿದ್ದಾಳೆ. ಈ ಸಾಧನೆಗೆ ಆಕೆಯ ಸಹನಾಶಕ್ತಿಯೇ ಪೂರಕ. ಅದನ್ನು ಗೌರವಿಸುತ್ತಾ `ಕ್ಷಮಯಾ ಧರಿತ್ರೀ' ಎಂದೆಲ್ಲಾ ಹಾಡಿ ಹೊಗಳಿದ್ದಾಗಿ ಇಂದು ಗೌರವಿಸಬೇಡವೇ. ■

